## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಸುಧಾಕರ, ಅಧ್ಯಕ್ಷರು, ಕುಂಚೂರು ಗ್ರಾಮ ಪಂಚಾಯಿತಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ವಿರುದ್ಧ ಕ್ರಮ ಜರುಗಿಸುವ ಬಗ್ಗೆ.

**ಓದಲಾಗಿದೆ:**

1. ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ದಾವಣಗೆರೆ ರವರ ದಿನಾಂಕ:27-12-2016ರ ಪ್ರಸ್ತಾವನೆ.
2. ಸರ್ಕಾರದ ಇದೇ ಸಮಸಂಖ್ಯೆಯ ದಿನಾಂಕ:03-04-2017ರ ಕಾರಣ ಕೇಳುವ ನೋಟೀಸು.
3. ಶ್ರೀ ಸುಧಾಕರ, ಅಧ್ಯಕ್ಷರು, ಕುಂಚೂರು ಗ್ರಾಮ ಪಂಚಾಯಿತಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ದಿನಾಂಕ:11-04-2017ರ ಲಿಖಿತ ಹೇಳಿಕೆ.
4. ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ದಾವಣಗೆರೆ ರವರ ದಿನಾಂಕ:25-04-2017ರ ಪರಿಷ್ಕೃತ ಪ್ರಸ್ತಾವನೆ.
5. ವಿಚಾರಣಾ ತಿಳುವಳಿಕೆ ಪತ್ರ ದಿನಾಂಕ:28-04-2017.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ದಿನಾಂಕ: 27-12-2016ರ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ದಾವಣಗೆರೆ ರವರ ಪ್ರಸ್ತಾವನೆಯಲ್ಲಿ ಈ ಕೆಳಕಂಡಂತೆ ತಿಳಿಸಿರುತ್ತಾರೆ.

ಹರಪನಹಳ್ಳಿ ತಾಲ್ಲೂಕು ಕುಂಚೂರು ಗ್ರಾಮ ಪಂಚಾಯಿತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳ ಹೆಸರಿನಲ್ಲಿ 2015-16ನೇ ಸಾಲಿನಲ್ಲಿ ನಡೆದಿರುವ ಹಣಕಾಸಿನ ವ್ಯವಹಾರದ ಬಗ್ಗೆ ಶ್ರೀ ಎ. ಲಕ್ಷ್ಮಣ ತಂದೆ ಮಾರ್ತಾಂಡಪ್ಪ, ಕುಂಚೂರು ಗ್ರಾಮ ಇವರು ದೂರು ಸಲ್ಲಿಸಿದ್ದು, ಸದರಿ ದೂರಿನ ಬಗ್ಗೆ ತನಿಖೆ ನಡೆಸಿ ವರದಿಯನ್ನು ಸಲ್ಲಿಸಲು ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ದಾವಣಗೆರೆ ಇವರಿಗೆ ಸೂಚಿಸಿದ್ದು, ಈ ಕಛೇರಿ ನಿರ್ದೇಶನದಂತೆ ತನಿಖೆ ನಡೆಸಿ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ಪರಿಶೀಲಿಸಲಾಗಿ, ಶ್ರೀ ಸುಧಾಕರ ಇವರು ಕುಂಚೂರು ಗ್ರಾಮ ಪಂಚಾಯಿತಿಯಲ್ಲಿ ದಿನಾಂಕ:01-04-2015 ರಿಂದ ಇಲ್ಲಿಯವರೆಗೆ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಸದರಿ ಅವಧಿಯಲ್ಲಿ ಬಿ.ಆರ್. ಜಿ.ಎಫ್. ಯೋಜನೆಯಡಿ ರೂ.3,91,514/-ಗಳು, 13ನೇ ಮತ್ತು 14ನೇ ಹಣಕಾಸು ಯೋಜನೆಯಡಿ ರೂ.37,41,356/-ಗಳು ಹಾಗೂ ವರ್ಗ-1ರಡಿ ರೂ.8,51,171/-ಗಳು ಒಟ್ಟಾರೆ ರೂ.49,84,041/-ಗಳ ಖರ್ಚು ಮಾಡಿದ ಬಗ್ಗೆ ಸರಿಯಾಗಿ ಕಡತಗಳನ್ನು ಹಾಗೂ ಓಚರ್ ನಿರ್ವಹಿಸದೆ ಸರ್ಕಾರದ ಮಾರ್ಗಸೂಚಿಯನ್ನು ಉಲ್ಲಂಘಿಸಿ ಕರ್ತವ್ಯಲೋಪವೆಸಗಿ ಹಣ ಬಿಡುಗಡೆ ಮಾಡಿ ಸರ್ಕಾರದ ಹಣ ದುರುಪಯೋಗಕ್ಕೆ ಕಾರಣರಾಗಿರುವುದರಿಂದ, ಈ ಅವಧಿಯಲ್ಲಿ ಕಾರ್ಯನಿರ್ವಹಿಸಿದ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀ ಸುಧಾಕರ ಇವರ ಮೇಲೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 43(ಎ) ಮತ್ತು 48(4)ರಡಿ ಕ್ರಮ ಜರುಗಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಶ್ರೀ ಸುಧಾಕರ, ಅಧ್ಯಕ್ಷರು, ಕುಂಚೂರು ಗ್ರಾಮ ಪಂಚಾಯಿತಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರು ಬಿ.ಆರ್. ಜಿ.ಎಫ್. 13ನೇ ಮತ್ತು 14ನೇ ಹಣಕಾಸು ಯೋಜನೆಯಡಿ ಹಾಗೂ ವರ್ಗ-1ರಡಿ ಒಟ್ಟಾರೆ ರೂ.49,84,041/-ಗಳ ಖರ್ಚು ಮಾಡಿದ ಬಗ್ಗೆ ಸರಿಯಾಗಿ ಕಡತಗಳನ್ನು ಹಾಗೂ ಓಚರ್ ನಿರ್ವಹಿಸದೆ ಸರ್ಕಾರದ ಮಾರ್ಗಸೂಚಿಯನ್ನು ಉಲ್ಲಂಘಿಸಿ ಕರ್ತವ್ಯಲೋಪವೆಸಗಿ ಹಣ ಬಿಡುಗಡೆ ಮಾಡಿರುವುದು ಸ್ಪಷ್ಟವಾಗಿ ಮೇಲ್ನೋಟಕ್ಕೆ ಕಂಡುಬರುವುದರಿಂದ, ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ ಶ್ರೀ ಸುಧಾಕರ, ಅಧ್ಯಕ್ಷರು, ಕುಂಚೂರು ಗ್ರಾಮ ಪಂಚಾಯಿತಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರಿಗೆ ಕಾರಣ ಕೇಳುವ ನೋಟೀಸ್‌ನ್ನು ಜಾರಿಗೊಳಿಸಲಾಗಿದ್ದು, ಸದರಿ ಕಾರಣ ಕೇಳುವ ನೋಟೀಸಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ(3)ರಲ್ಲಿ ದಿನಾಂಕ:11-04-2017ರ ಲಿಖಿತ ಹೇಳಿಕೆಯನ್ನು ಈ ಕೆಳಕಂಡಂತೆ ನೀಡಿರುತ್ತಾರೆ.

ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ದಾವಣಗೆರೆ ರವರು ತಮ್ಮ ಅಧಿಕಾರಿ / ಸಿಬ್ಬಂದಿಯವರಿಗೆ ತನಿಖೆ ಮಾಡಿ ವರದಿ ಸಲ್ಲಿಸಲು ಸೂಚನೆ ನೀಡಿದ್ದರು. ಅರ್ಜಿದಾರರಾದ ಶ್ರೀ ಎ. ಲಕ್ಷ್ಮಣ್ ಬಿನ್ ಮಾರ್ತಾಂಡಪ್ಪ ಕುಂಚೂರು ಗ್ರಾಮ ಇವರ ದಿ:01-08-2015 ರಿಂದ 13-10-2016 ರವರೆಗಿನ ದೂರಿನ ಅವಧಿಯಾಗಿದ್ದರಿಂದ ಸದರಿ

ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿದ್ದ ಪ್ರಿ.ಡಿ.ಓ.ರವರಾದ ಶ್ರೀ ಸಮುದ್ರ ಮಂಜುನಾಥ್, 01-04-2015 ರಿಂದ 24-11-2015 ರವರಗೆ, ಶ್ರೀ ಮುಕ್ತರ್ ಆಲಿ, ದಿನಾಂಕ:25-11-2015 ರಿಂದ ದಿ:17-01-2016 ರವರೆಗೆ, ಶ್ರೀ ಮಂಜನಾಯ್ಕ ಪಿ.ಪಿ. ದಿ:18-01-2016 ರಿಂದ 20-05-2016 ರವರೆಗೆ ಮತ್ತು ಶ್ರೀ ಖಾದರ್ ಬಾಷಾ, ದಿ:21-05-2016 ರಿಂದ 13-10-2016 ರವರೆಗೆ ಕರ್ತವ್ಯ ನಿರ್ವಹಿಸಿದ್ದು, ತನಿಖೆ ಕೈಗೊಂಡ ಸಂಧರ್ಭದಲ್ಲಿ ಈ ಮೇಲಿನ ಯಾವ ಪಿ.ಡಿ.ಓ. ರವರು ಗ್ರಾಮ ಪಂಚಾಯಿತಿ ಕುಂಚೂರುನಲ್ಲಿ ಕರ್ತವ್ಯನಿರ್ವಹಿಸುತ್ತಿರಲಿಲ್ಲ. ಲೆಕ್ಕ ತನಿಖೆ ಕೈಗೊಂಡ ಸಂದರ್ಭದಲ್ಲಿ ಶ್ರೀ ಆನಂದನಾಯ್ಕ ಇವರು ಕುಂಚೂರು ಗ್ರಾಮ ಪಂಚಾಯಿತಿಯ ಪಿ.ಡಿ.ಓ.ಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಇವರು ಹೊಸದಾಗಿ ಬಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದರಿಂದ ಕಡತಗಳು, ದಾಖಲೆಗಳು ಎಲ್ಲಿ ಎಂಬುದರ ಬಗ್ಗೆ ಪೂರ್ಣ ಪ್ರಮಾಣದ ಪ್ರಭಾರವನ್ನು ವಹಿಸಿಕೊಂಡಿರಲಿಲ್ಲ ಹಾಗೂ ಜಿಲ್ಲಾ ಪಂಚಾಯಿತಿಯಿಂದ ತನಖೆಗಾಗಿ ಆಗಮಿಸಿದ ತಂಡಕ್ಕೆ ಅವರು ನೀಡಿದ ದಾಖಲೆಗಳ ಆಧಾರದ ಮೇಲೆ ವರದಿಯನ್ನು ಸಿದ್ಧಪಡಿಸಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಯವರಿಗೆ ಲೆಕ್ಕ ತನಿಖಾ ವರದಿಯನ್ನು ನೀಡಿರುತ್ತಾರೆ. ಸದರಿ ವರದಿ ಆಧಾರದ ಮೇಲೆ ಹಣದುರುಪಯೋಗ ಹಾಗೂ ಅಕ್ರಮಗಳಿಗೆ ಸಂಬಂಧಿಸಿದಂತೆ ಕ್ರಮ ಜರುಗಿಸಲು ಗ್ರಾಮೀಣಾಭಿವೃದ್ಧಿ ಇಲಾಖೆಗೆ ಶಿಫಾರಸ್ಸು ಮಾಡಿರುವುದು ನಿಜವಿರುತ್ತದೆ.

ತದನಂತರ ಶ್ರೀ ಖಾದರ್ ಬಾಷ್, ಪೊಲೀಸ್ ಪೇದೆ, ಸಿ.ಸಿ.ಪಿಎ-394, ಹರಪನಹಳ್ಳಿ ಪೊಲೀಸ್ ಠಾಣೆಯಲ್ಲಿ ಹಾಗೂ ಶ್ರೀ ಪಿ.ಮಂಜನಾಯ್ಕ ಗ್ರೇಡ್-1 ಕಾರ್ಯದರ್ಶಿ, ನೀಲಗುಂದ ಗ್ರಾಮ ಪಂಚಾಯಿತಿ ಇವರು ತಮ್ಮ ಅನುಪಸ್ಥಿತಿಯಲ್ಲಿ ಆಡಿಟ್ ನಡೆಸಲಾಗಿದೆ. ಆದ್ದರಿಂದ ನಾವು ಲೆಕ್ಕ ತಪಾಸಣಾ ತಂಡಕ್ಕೆ ತಮಗೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ಒದಗಿಸಲು ಸಾಧ್ಯವಾಗಿರುವುದಿಲ್ಲ. ಕುಂಚೂರು ಗ್ರಾಮ ಪಂಚಾಯಿತಿಯಲ್ಲಿ ಹಾಲಿ ಪಿ.ಡಿ.ಓ. ಆಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಆನಂದನಾಯ್ಕ ಇವರಿಗೆ ಹೊಸದಾಗಿ ಬಂದಿದ್ದರಿಂದ ಕಡತಗಳನ್ನು ನೀಡಿರಲಿಲ್ಲ. ಹಾಗಾಗಿ ಲೆಕ್ಕ ತನಿಖೆಗೆ ಕಡತಗಳನ್ನು ನೀಡಿರಲಿಲ್ಲ. ಆದ್ದರಿಂದ ಇನ್ನೊಮ್ಮೆ ಲೆಕ್ಕ ತನಿಖೆ ತಂಡವನ್ನು ನಿಯೋಜಿಸಲು ಮುಖ್ಯ ಕಾರ್ಯನಿರ್ವಾಹಕಾಧಿಕಾರಿಯವರನ್ನು ಮನವಿ ಮಾಡಿಕೊಂಡ ಮೇರೆಗೆ ಪುನ: ಲೆಕ್ಕ ತನಿಖಾ ತಂಡವು ಕೂಲಂಕುಷವಾಗಿ ಪರಿಶೀಲಿಸಿ ಸಲ್ಲಿಸಿರುವ ವರದಿಯಲ್ಲಿ ಬಿಆರ್‌ಜಿಎಫ್, ವರ್ಗ-1, 13 & 14ನೇ ಹಣಕಾಸು ಯೋಜನೆಗೆ ಸಂಬಂಧಿಸಿದಂತೆ ನಿಯಮಾನುಸಾರ ಅನುಮೋದನೆ ಪಡೆದು ವೆಚ್ಚ ಭರಿಸಿರುತ್ತಾರೆಂದು ಕೆ.ಟಿ.ಪಿ.ಪಿ ನಿಯಮಾನುಸಾರ ಸಾಮಗ್ರಿ ಖರೀದಿಸಲಾಗಿದೆಯೆಂದು ಪರಿಷ್ಕೃತ ತನಿಖಾ ವರದಿಯನ್ನು ನೀಡಿರುತ್ತಾರೆ. ಹಾಗೂ ಕಾಮಗಾರಿಗಳ ಅನುಷ್ಠಾನದಲ್ಲಿ ಯಾವುದೇ ಲೋಪವಾಗಿರುವುದಿಲ್ಲವೆಂದು ಸಾಮಗ್ರಿಗಳ ಖರೀದಿಯಲ್ಲಿ ಯಾವುದೇ ನಿಯಮಗಳ ಉಲ್ಲಂಘನೆಯಾಗಿರುವುದಿಲ್ಲವೆಂದು ವರದಿ ನೀಡಿರುತ್ತಾರೆ. ಸದರಿ ವರದಿಯ ಆಧಾರದ ಮೇಲೆ ಅಮಾನತ್ತುಗೊಂಡ 3 ಜನ ಪಿ.ಡಿ.ಓ / ಕಾರ್ಯದರ್ಶಿಗಳು ಇವರಿಗೆ ಪುನ: ಸ್ಥಳ ನಿಯುಕ್ತಿಗೊಳಿಸಲಾಗಿದೆ. 2ನೇ ಪರಿಷ್ಕೃತ ವರದಿಯನ್ನು ತಾವು ಪರಿಶೀಲಿಸಿ ಈ ಪ್ರಕರಣದಿಂದ ಮುಕ್ತಗೊಳಿಸಬೇಕೆಂದು ಶ್ರೀ ಸುಧಾಕರ, ಅಧ್ಯಕ್ಷರು, ಕುಂಚೂರು ಗ್ರಾಮ ಪಂಚಾಯಿತಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ ರವರು ಕೋರಿರುತ್ತಾರೆ.

ಓದಲಾದ ಕ್ರಮ ಸಂಖ್ಯೆ (4) ದಿನಾಂಕ:25-04-2017ರ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ದಾವಣಗೆರೆ ರವರ ಪರಿಷ್ಕೃತ ಪ್ರಸ್ತಾವನೆಯಲ್ಲಿ, ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀ ಸುಧಾಕರ ಇವರು ಜವಾಬ್ದಾರರಾಗಿರುವುದರಿಂದ ಇವರ ಮೇಲೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 43(ಎ) ಮತ್ತು 48(4)ರಡಿ ಕ್ರಮ ಜರುಗಿಸುವಂತೆ ದಿ:27-12-2016ರ ಪತ್ರದಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಈ ಹಂತದಲ್ಲಿ ಈ ಪ್ರಕರಣದಲ್ಲಿ ಭಾಗಿಯಾದ ನೌಕರರನ್ನು ಸಹ ಶಿಸ್ತುಕ್ರಮಕ್ಕೆ ಒಳಪಡಿಸಿದ ನಂತರ ಸದರಿ ನೌಕರರು ತಮ್ಮ ಅನುಪಸ್ಥಿತಿಯಲ್ಲಿ ಲೆಕ್ಕ ತಪಾಸಣೆ ನಡೆಸಿ ವರದಿಯನ್ನು ಸಲ್ಲಿಸಿರುವುದರಿಂದ ತಾವು ಕಛೇರಿಯಲ್ಲಿ ಎಲ್ಲಾ ದಾಖಲೆಗಳನ್ನು ನಿರ್ವಹಿಸಿರುವುದಾಗಿ ಮರು ತನಿಖೆ ನಡೆಸುವಂತೆ ಕೋರಿದ ಹಿನ್ನೆಲೆಯಲ್ಲಿ, ಈ ಪ್ರಕರಣದಲ್ಲಿ ಭಾಗಿಯಾದ ಅಧ್ಯಕ್ಷರು / ಪಂಚಾಯಿತಿ ಅಭಿವೃದ್ಧಿ ಅಧಿಕಾರಿ / ಕಾರ್ಯದರ್ಶಿಗಳ ಸಮಕ್ಷಮದಲ್ಲಿ ಮರು ತನಿಖೆ ನಡೆಸುವಂತೆ ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ದಾವಣಗೆರೆ ರವರಿಗೆ ಸೂಚಿಸಲಾಗಿತ್ತು. ಸದರಿ ಸೂಚನೆಯಂತೆ ತನಿಖೆ ನಡೆಸಿ, ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ತನಿಖಾ ವರದಿಯನ್ನು ಪರಿಶೀಲಿಸಲಾಗಿ,

ಬಿ.ಆರ್.ಜಿ.ಎಫ್, ವರ್ಗ-1, 13 ಮತ್ತು 14ನೇ ಹಣಕಾಸು ಯೋಜನೆಗಳಿಗೆ ತಾಲ್ಲೂಕು ಪಂಚಾಯಿತಿಯಿಂದ ಅನುಮೋದನೆ ಪಡೆಯಲಾಗಿರುತ್ತದೆ. ಹಾಗೂ ಬಿ.ಆರ್.ಜಿ.ಎಫ್. ಕ್ರಿಯಾ ಯೋಜನೆ ಡಿ.ಪಿ.ಸಿ.ಯಲ್ಲಿ ಅನುಮೋದನೆಯಾದ ಕಡತವನ್ನು ಸಹ ಪರಿಶೀಲನೆಗೆ ಒದಗಿಸಿರುವುದಾಗಿ ತಿಳಿಸಿರುತ್ತಾರೆ. 2015-16 ಮತ್ತು 2016-17ನೇ ಸಾಲಿನಲ್ಲಿ ಖರ್ಚು ಭರಿಸಿದ ಎಲ್ಲಾ ಯೋಜನೆಗಳ ಮೊತ್ತಕ್ಕೆ ವೋಚರ್‌ಗಳನ್ನು ಪರಿಶೀಲನೆಗೆ ಒದಗಿಸಿರುವುದರಿಂದ ಹಾಗೂ ಸಾಮಗ್ರಿ ಖರೀದಿಸುವಾಗ ದರಪಟ್ಟಿ ಆಹ್ವಾನಿಸಿ ಸಾಮಗ್ರಿ ಖರೀದಿಸಿ ದಾಸ್ತಾನು ಮತ್ತು ವಿತರಣಾ ವಹಿಯನ್ನು ನಿರ್ವಹಿಸಿರುವುದರಿಂದ ಅವರ ವಿರುದ್ಧ ಮಾಡಲಾದ ಆರೋಪಗಳಿಂದ ಮುಕ್ತಗೊಳಿಸುವಂತೆ ತನಿಖಾ ವರದಿಯಲ್ಲಿ ತಿಳಿಸಿರುತ್ತಾರೆ. ಆದ್ದರಿಂದ ಮುಖ್ಯ ಲೆಕ್ಕಾಧಿಕಾರಿ, ಜಿಲ್ಲಾ ಪಂಚಾಯತ್ ದಾವಣಗೆರೆ ಇವರು ತನಿಖಾ ವರದಿಯಲ್ಲಿ ಸರ್ಕಾರದ ಹಣ ದುರುಪಯೋಗ ವಾಗಿರುವುದಿಲ್ಲವೆಂದು ತಿಳಿಸಿದ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀ ಸುಧಾಕರ ಇವರ ಮೇಲೆ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ 1993 ಪ್ರಕರಣ 43(ಎ) ಮತ್ತಿ 48(4) ರಡಿ ಜರುಗಿಸಬೇಕಾದ ಶಿಸ್ತುಕ್ರಮವನ್ನು ಕೈಬಿಡುವಂತೆ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ದಾವಣಗೆರೆ ರವರು ಕೋರಿರುತ್ತಾರೆ.

ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ದಾವಣಗೆರೆ ರವರ ಪ್ರಸ್ತಾವನೆಗಳು, ಶ್ರೀ ಸುಧಾಕರ, ಅಧ್ಯಕ್ಷರು, ಕುಂಚೂರು ಗ್ರಾಮ ಪಂಚಾಯಿತಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರು ನೀಡಿರುವ ಲಿಖಿತ ಹೇಳಿಕೆಗಳನ್ನು ಸರ್ಕಾರವು ಪರಿಶೀಲಿಸಿದ್ದು, ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ದಾವಣಗೆರೆ ರವರು ಎಲ್ಲಾ ವಿಚಾರಣೆ ಕೂಲಂಕುಷವಾಗಿ ಮಾಡಿ ಯಾವುದೇ ಬಾಕಿ / ದುರುಪಯೋಗ ಇರುವುದಿಲ್ಲವೆಂದು ವರದಿ ಮಾಡಿರುವ ಹಿನ್ನೆಲೆಯಲ್ಲಿ ಶ್ರೀ ಸುಧಾಕರ, ಅಧ್ಯಕ್ಷರು, ಕುಂಚೂರು ಗ್ರಾಮ ಪಂಚಾಯಿತಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ 1993 ಪ್ರಕರಣ 43(ಎ) ಮತ್ತಿ 48(4) ರಡಿ ಜರುಗಿಸಬೇಕಾದ ಕ್ರಮವನ್ನು ಕೈಬಿಡಲು ನಿರ್ಧರಿಸಿದೆ

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 308 ಗ್ರಾಪಂಅ 2017 ಬೆಂಗಳೂರು, ದಿನಾಂಕ:13-10-2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ದಾವಣಗೆರೆ ರವರು ಎಲ್ಲಾ ವಿಚಾರಣೆ ಕೂಲಂಕುಷವಾಗಿ ಮಾಡಿ ಯಾವುದೇ ಬಾಕಿ / ದುರುಪಯೋಗ ಇರುವುದಿಲ್ಲವೆಂದು ವರದಿ ಮಾಡಿರುವ ಹಿನ್ನೆಲೆಯಲ್ಲಿ ಶ್ರೀ ಸುಧಾಕರ, ಅಧ್ಯಕ್ಷರು, ಕುಂಚೂರು ಗ್ರಾಮ ಪಂಚಾಯಿತಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ 1993 ಪ್ರಕರಣ 43(ಎ) ಮತ್ತಿ 48(4) ರಡಿ ಜರುಗಿಸಬೇಕಾದ ಕ್ರಮವನ್ನು ಕೈಬಿಟ್ಟು ಸರ್ಕಾರವು ಆದೇಶಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್),
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ದಾವಣಗೆರೆ ಜಿಲ್ಲೆ.
2. ಕಾರ್ಯನಿರ್ವಾಹಕಾಧಿಕಾರಿ, ತಾಲ್ಲೂಕು ಪಂಚಾಯಿತಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ.
3. ಶ್ರೀ ಸುಧಾಕರ, ಅಧ್ಯಕ್ಷರು, ಕುಂಚೂರು ಗ್ರಾಮ ಪಂಚಾಯಿತಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ
4. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕುಂಚೂರು ಗ್ರಾಮ ಪಂಚಾಯಿತಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ
5. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.
6. ಗಣಕ ಕೋಶ